

## ಭಾವಣಿ ಹಲಗೆಗೆ ರಂಗೋಲಿ

ಶಿರಸಿ ತಾಲ್ಲೂಕಿನ ಸೋಮಸಾಗರದ ಗಿರಿಜಾ ಭಟ್ಟರ ಮನೆಯ ಭಾವಣಿಯ ಹಲಗೆಗೆ ಕೆಳಮುಖವಾಗಿ ರಂಗೋಲಿ ಹಾಕಿರುವುದು ವಿಶೇಷವಾಗಿದೆ. ದೇವರಗುಡಿ ಎದುರಿನಲ್ಲಿ ಮಹಡಿಗೆ ಅಳವಡಿಸಿರುವ ಹಲಗೆಯ ಮೇಲೆ ಕೆಳಮುಖವಾಗಿ ರಂಗೋಲಿ ಹಾಕಲಾಗಿದೆ.

ರಂಗೋಲಿ ಕಲಾವಿದೆಯೂ ಆದ ಗಿರಿಜಾ ಭಟ್ಟರು ಈ ಹಲಗೆಯನ್ನೂ ಬಿಡದೆ ರಂಗೋಲಿ ಚಿತ್ರಿಸಿದ್ದಾರೆ. ಇಲ್ಲಿ, ಕೆಳಮುಖವಾಗಿ ರಂಗೋಲಿಯ ಹುಡಿಯನ್ನು ಹೇಗೆ ಹಾಕಿರಬಹುದು ಎಂಬ ಪ್ರಶ್ನೆ ಕಾಡುತ್ತದೆ. ಅದಕ್ಕೆ ಗಿರಿಜಾ ಭಟ್ಟರು ಉತ್ತರಿಸುವುದು ಹೀಗೆ...

‘ಸಮತಟ್ಟಾದ ಮರದ ಮಣೆಯ ಮೇಲೆ ದಪ್ಪನೆ ಬಟ್ಟೆಯನ್ನು ನೆರಿಗೆ ಬೀಳದಂತೆ ಹಾಸಿಕೊಳ್ಳಬೇಕು. ಅದರ ಮೇಲೆ ನಮಗಿಷ್ಟವಾದ ರಂಗೋಲಿಯನ್ನು ಚಿತ್ರಿಸಬೇಕು. ಮೇಲಿನ ಅಂಕಣದ ಹಲಗೆಗೆ ನೀರನ್ನು ಹಚ್ಚಿಕೊಂಡು ಅದಕ್ಕೆ ರಂಗೋಲಿ ಬಟ್ಟೆ ಮಣೆಯನ್ನು ಮೇಲ್ಮುಖವಾಗಿ ಅಲುಗದಂತೆ ಗಟ್ಟಿಯಾಗಿ ಒತ್ತಬೇಕು. ಆಗ ಬಟ್ಟೆಯ ಮೇಲಿರುವ ರಂಗೋಲಿಯು ನೀರಿನಿಂದ ಒದ್ದೆಯಾದ ಹಲಗೆಗೆ ಅಂಟಿಕೊಳ್ಳುತ್ತದೆ. ವರ್ಷಗಳಾದರೂ ಹಾಗೆಯೇ ಇರುತ್ತದೆ’.

—ಗ.ಮ. ತುಂಬೇಮನೆ, ಶಿರಸಿ

## ಟರ್ಕಿ ಕೋಳಿಯ ನರ್ತನ

ಬೆಳಗಿನ ವಾಯುವಿಹಾರಕ್ಕೆ ಹೋದಾಗ, ಕಣ್ಣಿಗೆ ಬಿದ್ದ ಟರ್ಕಿ ಕೋಳಿಯೊಂದು ತನ್ನೆಲ್ಲಾ ಗರಿಗಳನ್ನು ಬೀಸಣಿಗೆಯಂತೆ ಬಿಚ್ಚಿಕೊಂಡು ಸುಂದರವಾಗಿ ನರ್ತಿಸುತ್ತಿತ್ತು. ನಾಟ್ಯವಾಡುವ ನವಿಲೇ ಎದುರಾಯಿತೇನೋ ಎನ್ನುವಂತೆ ಅರೆಕ್ಷಣ ಭಾಸವಾಯಿತು. ಕೋಳಿಗಳ ಜಾತಿಯಲ್ಲೇ ಅತ್ಯಂತ ದೊಡ್ಡದು ಈ ಟರ್ಕಿ ಕೋಳಿ. ಇದು ಮೂಲತಃ ಉತ್ತರ ಅಮೆರಿಕದ್ದು. ಟರ್ಕಿಯ ವ್ಯಾಪಾರಿಗಳು ಈ ಕೋಳಿಯನ್ನು ಬ್ರಿಟಿಷರಿಗೆ ಪರಿಚಯಿಸಿದ ಬಳಿಕ ಇದಕ್ಕೆ ‘ಟರ್ಕಿ’ ಹೆಸರು ಸೇರಿಕೊಂಡಿತು ಎನ್ನಲಾಗಿದೆ.



ಇದರ ವೈಜ್ಞಾನಿಕ ನಾಮಧೇಯ, ‘ಮೆಲೆಯಾಗ್ರಿಸ್ ಗ್ಯಾಲ್ಲೋಪಾವೋ’. ಸುಮಾರು 20 ಮಿಲಿಯನ್ ವರ್ಷಗಳ ಹಿಂದೆಯೇ ಭೂಮಿಯ ಮೇಲೆ ವಿಕಾಸವಾದ ಈ ಸುಂದರ ಪಕ್ಷಿಯನ್ನು ಮನುಷ್ಯ ಎರಡು ಸಾವಿರ ವರ್ಷಗಳಿಂದ ಆಹಾರಕ್ಕೆಂದು ಸಾಕುಪಕ್ಷಿಯಾಗಿ ಬಳಸಿಕೊಂಡು ಬಂದಿದ್ದಾನೆ. ಮನುಷ್ಯರ ಮೇಲೆ ಆಗಾಗ ದಾಳಿಯನ್ನು ಮಾಡುವ ಈ ಟರ್ಕಿ ಕೋಳಿಯ ಹತ್ತಿರ ಹೋಗಿ ಫೋಟೊ ತೆಗೆಯಲು ಮುಂದಾದೆ. ಅದರಿಂದ ಸಿಟ್ಟಾಗಿ ನನ್ನನ್ನೇ ಕುಕ್ಕಲು ಓಡಿ ಬಂದಿತ್ತು!

—ಎಚ್.ಎಸ್. ನವೀನಕುಮಾರ್, ಹೊಸದುರ್ಗ

## ಸಿಂಗಾರಕ್ಕೆ ಸಿಂಗಪುರ ಅಡಿಕೆ

ವಾಣಿಜ್ಯ ಬೆಳೆಯಾದ ಅಡಿಕೆಯನ್ನು ಅಲಂಕಾರಕ್ಕೂ ಬಳಸಬಹುದೆಂದರೆ ನಂಬುತ್ತೀರಾ? ಹೌದು. ಸಿಂಗಪುರ ಅಡಿಕೆಯಿಂದ ಇದು ಸಾಧ್ಯ. ಈ ಅಡಿಕೆ ಸಿಂಗಪುರ ಮತ್ತು ಮಲೇಷ್ಯಾದ ಸಹಜ ಬೆಳೆಯಾದ್ದರಿಂದ ಈ ಹೆಸರು ಪಡೆದುಕೊಂಡಿದೆ. ಈ ಅಡಿಕೆ ನೋಡಲು ಸಾಮಾನ್ಯ ಅಡಿಕೆಗಿಂತ ಚಿಕ್ಕದಾಗಿರುತ್ತದೆ. ಕಡುಗೆಂಪು ಹೊರಮೈ ಹೊಂದಿದ್ದು, ಆಕರ್ಷಕವಾಗಿರುತ್ತದೆ. ಹಾಗಾಗಿ ಮಲೆನಾಡುಗಳಲ್ಲಿ ಇದನ್ನು ಹಬ್ಬಗಳಲ್ಲಿ ತೋರಣವಾಗಿ ಬಳಸುವುದುಂಟು. ನೋಡಲು ಸಾಮಾನ್ಯವಾದ ಅಡಿಕೆ ಮರಗಳಂತೆ ಕಾಣಿಸುವ ಇದು ಸುಮಾರು 25 ಅಡಿಗಳಷ್ಟು ಎತ್ತರ ಬೆಳೆಯುತ್ತದೆ. ಇದರಿಂದಾಗಿ ಕೊಯ್ಯುವುದು ಸುಲಭ. ಕಡಿಮೆ ಆರೈಕೆ ಸಾಕು. ಔಷಧ ಸಿಂಪರಣೆಯೂ ಅಷ್ಟಾಗಿ ಬೇಕಾಗಿಲ್ಲ. ಬುಡದಲ್ಲಿ ನಾಲ್ಕೈದು ಕವಲುಗಳಾಗಿ ಮರಗಳಾಗುವುದುಂಟು. ಒಗರು ಕಡಿಮೆ ಇದ್ದು, ತಿನ್ನಲು ಹಿತ ಎನ್ನುವವರಿದ್ದಾರೆ.

—ರಾಮಕೃಷ್ಣ ಹೆಗಡೆ, ಬೆಂಗಳೂರು




**ನೀವೂ ಬರೆಯಿರಿ**

‘ಸುಧಾ’ ವಾರಪತ್ರಿಕೆಯಲ್ಲಿ ಪ್ರಕಟವಾಗುವ ‘ನಿಮ್ಮ ಪುಟ’ ಓದುಗರ ಅಂಕಣಕ್ಕೆ ನಿಮ್ಮ ಸುತ್ತಮುತ್ತಲಿನ ವಿಶೇಷ ಸಂಗತಿಗಳ ಬಗ್ಗೆ ನೂರು ಪದಗಳ ಬರಹ ಮತ್ತು ಅದಕ್ಕೆ ಸಂಬಂಧಿಸಿದ ಚೆಂದದ ಫೋಟೊವನ್ನು ನಮಗೆ ಕಳುಹಿಸಿಕೊಡಿ.

**ವಿಳಾಸ:** editorsu@sudha.co.in

@SudhaWeekly